ಓ.ಎಸ್.376/2015
ಪಿ.ಡಬ್ಲ್ಯೂ-3

ದಿನಾಂಕಃ **18.06.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಹೆಚ್.ಎನ್. ವಕೀಲರಿಂದಃ

ನಾನು ದ್ವಿತೀಯ ಪಿಯುಸಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. 3 ನೇ ವಾದಿಯ ತಾಯಿಯ ಹೆಸರು ಗಂಗಮ್ಮ. ನನ್ನ ತಾಯಿಯ ಹೆಸರು ಲಿಂಗಮ್ಮ. ನನ್ನ ತಾಯಿ ಮತ್ತು 3 ನೇ ವಾದಿಯ ತಾಯಿ ಇಬ್ಬರು ಕಾಸ ಅಕ್ಕ ತಂಗಿಯರು ಎಂದು ಸೂಚಿಸುವುದು ಸರಿಯಲ್ಲ. ಆದರೆ ಗಂಗಮ್ಮ ನನಗೆ ದೊಡ್ಡಮ್ಮ ಆಗಬೇಕು. ನಾನು ಜನ್ಮತಃ ಬಡಿಗೊಂಡನಹಳ್ಳಿ ಗ್ರಾಮದಲ್ಲಿಯೇ ವಾಸವಾಗಿರುತ್ತೇನೆ. 1 ನೇ ಪ್ರತಿವಾದಿ ಮತ್ತು 1 ನೇ ಪ್ರತಿವಾದಿಯ ಗಂಡ ಗೋವಿಂದಪ್ಪರವರನ್ನು ನಾನು ನೋಡಿರುತ್ತೇನೆ. 1 ನೇ ಪ್ರತಿವಾದಿಯ ಮಕ್ಕಳನ್ನು ಸಹ ನಾನು ನೋಡಿರುತ್ತೇನೆ. ಅವರು ಬಡಿಗೊಂಡನಹಳ್ಳಿ ಗ್ರಾಮದಲ್ಲಿಯೇ ವಾಸವಾಗಿರುತ್ತಾರೆ.

2. ದಾವಾ ಸ್ವತ್ತಿನ ಸರ್ವೆ.ನಂಬರ್.355/5. ನನಗೆ ಸರ್ವೆ.ನಂಬರ್.399 ರಲ್ಲಿ ಜಮೀನು ಇರುತ್ತದೆ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನನಗೆ ಜಮೀನು ಇರುವುದಿಲ್ಲ. ದಾವಾ ಸ್ವತ್ತಿನಿಂದ ಸುಮಾರು ಅರ್ಧ ಕಿ.ಮೀ ದೂರದಲ್ಲಿ ನಮ್ಮ ಜಮೀನು ಇರುತ್ತದೆ. ಸರ್ವೆ.ನಂಬರ್.355 ರಲ್ಲಿನ ಒಟ್ಟು ವಿಸ್ತೀರ್ಣ ಮತ್ತು ಅದರಲ್ಲಿ ಆದಂತಹ ಪೋಡುಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸರ್ವೆ.ನಂಬರ್.355 ರ ಒಟ್ಟು ಜಮೀನು ಯಾರ ಯಾರ ಹೆಸರಿನಲ್ಲಿ ಖಾತೆ ಇರುತ್ತದೆ ಎಂದು ಹೇಳಲಾಗುವುದಿಲ್ಲ.

3. ದಾವಾ ಸ್ವತ್ತು ದೊಡ್ಡಲಿಂಗಯ್ಯನ ಮಗ ಬಿ. ಚಿಕ್ಕಲಿಂಗಪ್ಪರವರಿಗೆ ಸೇರಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರಿಂದ 3 ನೇ ಪ್ರತಿವಾದಿಯ ತಾಯಿ ಗಂಗಮ್ಮ ಖರೀದಿ

Nagaraju

18/6/2026

ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತನ್ನು ಗಂಗಮ್ಮ ಖರೀದಿ ಮಾಡಿರುತ್ತಾರೆ ಎಂದು ನಮ್ಮ ತಾತರವರು ಮಾತನಾಡುತ್ತಿದ್ದ ಕಾರಣ ನನಗೆ ಗೊತ್ತಾಗಿರುತ್ತದೆ. ದಾವಾ ಸ್ವತ್ತನ್ನು ಗಂಗಮ್ಮ ಖರೀದಿ ಮಾಡಿದ ಸಮಯದಲ್ಲಿ ನಾನು ಹಾಜರಿರಲಿಲ್ಲ. ಗಂಗಮ್ಮ ದಾವಾ ಸ್ವತ್ತನ್ನು ಎಷ್ಟು ರೂಗಳಿಗೆ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಕೋಟಗಾರನಹಳ್ಳಿ ಗ್ರಾಮ ನಮ್ಮ ಊರಿನಿಂದ 3 ಕಿ.ಮೀ. ದೂರದಲ್ಲಿ ಇರುತ್ತದೆ. ಕೋಟಗಾರನಹಳ್ಳಿ ಗ್ರಾಮದ ದೊಡ್ಡಲಿಂಗಯ್ಯನ ಮಗ ಚಿಕ್ಕಲಿಂಗಯ್ಯನ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ದೊಡ್ಡಲಿಂಗಯ್ಯರವರಿಗೆ ಲಿಂಗಪ್ಪ, ರಾಮಯ್ಯ, ಮಹಲಿಂಗಪ್ಪ ಮತ್ತು ಬಿ.ಚಿಕ್ಕಲಿಂಗಪ್ಪ ಎಂಬ ನಾಲ್ಕು ಜನ ಮಕ್ಕಳು ಇರುತ್ತಾರೆ ಎಂದರೆ ಸರಿ. ಸದರಿ ನಾಲ್ಕು ಜನ ನನ್ನ ಸೋದರ ಮಾವಂದಿರು ಎಂದರೆ ಸರಿ. ದಾವಾ ಸ್ವತ್ತು ಮೂಲತಃ ದೊಡ್ಡಲಿಂಗಯ್ಯನವರಿಗೆ ಸೇರಿತ್ತು ಎಂದರೆ ಸರಿ.

4. ದಿಃ02.04.1975 ರಂದು ದೊಡ್ಡಲಿಂಗಯ್ಯನ ಮಗ ಬಿ.ಚಿಕ್ಕಲಿಂಗಪ್ಪ ಒಟ್ಟು ಕುಟುಂಬದಿಂದ ಪ್ರತ್ಯೇಕವಾಗಿ ಬಂದಾಗ ದಾವಾ ಸ್ವತ್ತು ನೊಂದಾಯಿತ ಹಕ್ಕು ಬಿಡುಗಡೆ ಪತ್ರದ ಮೂಲಕ ಬಿಚಿಕ್ಕಲಿಂಗಪ್ಪನವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಸ್ವತ್ತನ್ನು ಬಿ. ಚಿಕ್ಕಲಿಂಗಪ್ಪ ದಿಃ02.06.1975 ರಂದು ಗೋವಿಂದಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಕ್ರಯಪತ್ರದಂತೆ ದಾವಾ ಸ್ವತ್ತಿನ ಖಾತೆ ಗೋವಿಂದಪ್ಪನವರ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಗೋವಿಂದಪ್ಪ 2001 ರಲ್ಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಗೋವಿಂದಪ್ಪ ತೀರಿಕೊಂಡ ನಂತರ ದಾವಾ ಸ್ವತ್ತಿನ ಖಾತೆ 1 ಪ್ರತಿವಾದಿ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಕ್ರಯಪತ್ರದ ಆಧಾರದ ಮೇರೆಗೆ ಗೋವಿಂದಪ್ಪ, ಗೋವಿಂದಪ್ಪ ತೀರಿಕೊಂಡ ನಂತರ ಚಿಕ್ಕಮ್ಮ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಚಿಕ್ಕಮ್ಮ ಸ್ವಾಧೀನದಲ್ಲಿ

Nagaraj

18/6/2026

ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ದಿ:14.05.1970 ರಂದು ದಾವಾ ಸ್ವತ್ತಿನ ಖಾತೆ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಇಂದಿಗೂ 1 ನೇ ಪ್ರತಿವಾದಿಯ ಮಕ್ಕಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿಗೆ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ಗಂಗಮ್ಮನ ಜಮೀನು, ಉತ್ತರಕ್ಕೆ ಗಂಗಮ್ಮನ ಜಮೀನು, ದಕ್ಷಿಣಕ್ಕೆ ಹಳ್ಳ ಇರುತ್ತದೆ. ದಾವಾ ಸ್ವತ್ತಿನ ಪಶ್ಚಿಮಕ್ಕೆ ಇರುವ ಹಳ್ಳದ ಪಶ್ಚಿಮಕ್ಕೆ ಗಂಗಮ್ಮರವರ ಜಮಿನು ಇರುತ್ತದೆ. ದಾವಾ ಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ವಾದಿಗಳು ನನ್ನ ಸಂಬಂಧಿಕರು ಆದ ಕಾರಣ ವಾದಿಗಳಿಗೆ ಸಹಾಯ ಮಾಡಲು ವಾದಿಗಳ ಹೇಳಿಕೆ ಮೇರೆಗೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ಹತ್ತಿರ ಹೋಗಲು ನನಗೆ ಯಾವುದೇ ಕೆಲಸ ಇರುವುದಿಲ್ಲ ಸಾಕ್ಷಿ ಮುಂದುವರೆದು ಹಾಗೆ ಸುಮ್ಮನೆ ಹೋಗುತ್ತೇನೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತನ್ನು ನಾನು ನೋಡದೆ ಇದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

Nagaraju

ಓ. ಹೇ. ಕೇ. ಸರಿ. ಇದೆ.

18/6/2026

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ